

**ರಾಜಕುಮಾರ್, ಅಮಿತಾಭ್ ಬಚ್ಚನ್ ಅವರೊಂದಿಗೆ ವಿಜಯ್**

ಪಟ್ಟು ಬಿಡುತ್ತಿರಲಿಲ್ಲವಂತೆ. ಅವರಿಗೆ ಕಥೆಗಳ ಬಗ್ಗೆ ಜಡ್ಜ್‌ಮೆಂಟ್ ಚೆನ್ನಾಗಿತ್ತು. ಅವರ ಪ್ರಕಾರ ಚಿತ್ರಕಥೆ ಬಿಗಿಯಾಗಿರಬೇಕು, ಸಿನಿಮಾ ವೇಗವಾಗಿ ಸಾಗಬೇಕು. ಎಲ್ಲಕ್ಕೂ ಮೊದಲು ಒಳ್ಳೆಯ ಕಥೆ ಬೇಕು ಎನ್ನುವ ನಿಲುವು ಅವರದಾಗಿತ್ತು. ಅವರು ಒಂದು ಸಬ್ಜೆಕ್ಟ್ ಅಖೈರು ಮಾಡುವ ಮುಂಚೆ ಅದರ ಬಗ್ಗೆ ದೊಡ್ಡರಂಗೇಗೌಡ, ಉದಯಶಂಕರ್, ಸುಂದರ್ ಹೀಗೆ ನಾಲ್ಕೈದು ಜನರೊಂದಿಗೆ ಚರ್ಚೆ ಮಾಡುತ್ತಿದ್ದಂತೆ. ತಾವೊಬ್ಬ ಅಪರೂಪದ ಪ್ರತಿಭಾವಂತ ಎಂದು ಭಾವಿಸದೇ ಪ್ರತಿ ಚಿತ್ರಕ್ಕೂ ಶ್ರಮ ಹಾಗೂ ಬದ್ಧತೆಗಳಿಂದ ದುಡಿದದ್ದೇ ವಿಜಯ್ ಅವರ ಯಶಸ್ಸಿನ ಹಿಂದಿನ ಗುಟ್ಟಾಗಿತ್ತು. ಸಿನಿಮಾಗೆ ಎಷ್ಟು ಬೇಕೋ ಅಷ್ಟು ಪರಿಶ್ರಮ ಹಾಕುತ್ತಿದ್ದ ಅವರು ಬೇರೆ ವಿಚಾರಗಳ ಬಗ್ಗೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ವೈಯಕ್ತಿಕವಾಗಿ ಸಂಕೋಚದ ಹಾಗೂ ಹಿಂಜರಿಕೆಯ ವ್ಯಕ್ತಿಯಾಗಿದ್ದ ಅವರು, ಮಾಧ್ಯಮಗಳಿಂದ ದೂರವೇ ಇರುತ್ತಿದ್ದರು. ತಾವೊಬ್ಬ ಡೈರೆಕ್ಟರ್ ಎಂದು ಹೊರಜಗತ್ತಿಗೆ ತೋರಿಸಿಕೊಳ್ಳಲೂ ಅವರಿಗೆ ಸಂಕೋಚವಂತೆ. ಕೆಲಸ ಇರುವಷ್ಟು ದಿನ ಬೆಂಗಳೂರಿನ ಮೋತಿಮಹಲ್ ಹೋಟೆಲ್‌ನಲ್ಲಿರುತ್ತಿದ್ದ ವಿಜಯ್, ಚಿತ್ರ ಬಿಡುಗಡೆಯಾದ ಮಾರನೇ ದಿನವೇ ಚೆನ್ನೈ ಸೇರಿಕೊಳ್ಳುತ್ತಿದ್ದರಂತೆ. ಸದಾ ಪ್ರಚಾರದಿಂದ ದೂರವೇ ಇರುತ್ತಿದ್ದ ಅವರು, ಮಾಧ್ಯಮದವರೇ ಮುಂದೆ ಬಂದು ಮಾತನಾಡಿಸಿದರೂ, 'ನನ್ನ ಬಗ್ಗೆ ಬರೆಯೋದೇನಿದೆ, ಹೀರೊ ಬಗ್ಗೆ ಬರೆಯಿರಿ' ಎನ್ನುತ್ತಿದ್ದರಂತೆ.

ರಾಜಕುಮಾರ್ ಅವರನ್ನು ಕಂಡರೆ ವಿಜಯ್ ಅವರಿಗೆ ಅಪಾರ ಗೌರವ. ಬೆಂಗಳೂರಿನಲ್ಲಿದ್ದರೆ ವಾರಕ್ಕೊಮ್ಮೆಯಾದರೂ ರಾಜ್ ಅವರನ್ನು ಭೇಟಿ ಮಾಡುತ್ತಿದ್ದರು. ಇದ್ದರೆ ರಾಜ್ ಅವರಂತೆ ಇರಬೇಕು ಎನ್ನುತ್ತಿದ್ದರಂತೆ! ಪಾರ್ವತಮ್ಮ ರಾಜಕುಮಾರ್ ಅವರನ್ನು ಕಂಡರೂ ವಿಜಯ್ ಅವರಿಗೆ ಅಷ್ಟೇ ಗೌರವ. ತಮ್ಮಲ್ಲಿದ್ದ ಕಸುಬನ್ನು ಗುರುತಿಸಿ, ಕೆಲಸ ಕೊಟ್ಟು ಬೆಳೆಸಿದವರು ಪಾರ್ವತಮ್ಮ ಎನ್ನುವ ಕಾರಣಕ್ಕೆ ಅವರ ಕಾಲು ಮುಟ್ಟಿ ನಮಸ್ಕರಿಸುತ್ತಿದ್ದರಂತೆ.

ಆಂಧ್ರದಲ್ಲಿ ಹುಟ್ಟಿ ತಮಿಳುನಾಡಿನಲ್ಲಿ ನೆಲೆಸಿದ್ದ ವಿಜಯಾ ರೆಡ್ಡಿ ಕನ್ನಡಿಗರು ಮರೆಯಲಾಗದ ಚಿತ್ರಗಳನ್ನು ನೀಡಿದ್ದಾರೆ. ಒಬ್ಬ ನಟನಾಗಿ ರಾಜಕುಮಾರ್ ಅವರಿಗಿದ್ದ ವೈವಿಧ್ಯತೆ ನಿರ್ದೇಶಕರ ಪೈಕಿ ಇದ್ದದ್ದು ವಿಜಯಾ ರೆಡ್ಡಿ ಅವರೊಬ್ಬರಿಗೆ



**ಹೊಸ ಚಿಗುರು ಶಿವರಾಜಕುಮಾರ್ ಜೊತೆ ಹಳೆಬೇರು ವಿಜಯ್**

ಮಾತ್ರವೇ. ಐತಿಹಾಸಿಕ, ಪೌರಾಣಿಕ, ಭಕ್ತಿಪ್ರಧಾನ, ಸಾಹಸಪ್ರಧಾನ, ಸಾಮಾಜಿಕ, ಹೀಗೆ ಎಲ್ಲ ಬಗೆಯ ಚಿತ್ರಗಳನ್ನು ಮಾಡಿ ಯಶಸ್ಸು ಕಂಡವರು ಅವರು. ಅವರ ಚಿತ್ರಗಳು ಸೋತಿದ್ದೇ ಕಡಿಮೆ. ಕೇವಲ ಯಶಸ್ಸಿನ ದೃಷ್ಟಿಯಿಂದಷ್ಟೇ ಅಲ್ಲದೇ ಕಲಾತ್ಮಕತೆಯ ದೃಷ್ಟಿಯಿಂದಲೂ ಅವರ ಚಿತ್ರಗಳ ವಸ್ತು, ಶೈಲಿ, ಸಂಗೀತ, ಹಾಡುಗಳು ಅನುಪಮವಾಗಿವೆ. ಪುಟ್ಟಣ್ಣ ಕಣಗಾಲ್ ಹೆಣ್ಣಿನ ಒಳತೋಟಿಗೆ ಒತ್ತುಕೊಟ್ಟು ತೀವ್ರ ಭಾವಾವೇಶದ ನಿರೂಪಣಾ ತಂತ್ರದ ಮೊರೆ ಹೋದರು. ಸಿದ್ದಲಿಂಗಯ್ಯ ಗ್ರಾಮಕೇಂದ್ರಿತ ಕಥೆಗಳನ್ನು ಬದುಕಿನ ಸಹಜ ಲಯಕ್ಕೆ ಹತ್ತಿರವಿರುವಂತೆ ನಿರೂಪಿಸುತ್ತಿದ್ದರು. ವಿಜಯಾ ರೆಡ್ಡಿ ಅವರದ್ದು ಇವರಿಬ್ಬರಿಗಿಂತ ಭಿನ್ನ ಹಾದಿ; ಅವರು ನಿರ್ದಿಷ್ಟ ರೀತಿಯ ಕತೆಗಳಿಗೆ, ಯಾವುದೋ ಒಂದು ನಿರ್ದಿಷ್ಟವಾದ ನಿರೂಪಣಾ ತಂತ್ರಕ್ಕೆ ಅಂಟಿಕೊಂಡವರಲ್ಲ. ಅವರ ಚಿತ್ರಗಳೆಂದರೆ, ಹತ್ತಾರು ರೀತಿಯ ಕಥೆ, ನೂರಾರು ಭಾವ ಭಂಗಿಗಳ ಹದವಾದ ಪಾಕ. ಆದರೆ, ಅದೇಕೋ ಏನೋ ಆ ಕಾಲಘಟ್ಟದ ಶ್ರೇಷ್ಠ ನಿರ್ದೇಶಕರ ಪಟ್ಟಿಯು ಪುಟ್ಟಣ್ಣ ಕಣಗಾಲ್ ಅವರಿಂದ ಆರಂಭಗೊಂಡು ಸಿದ್ದಲಿಂಗಯ್ಯನವರ ಬಳಿಗೆ ಬರುವ ಹೊತ್ತಿಗೆ ತಿಣುಕಾಡಿ ನಿಂತುಬಿಡುತ್ತದೆ. ಇಂಥ ಸಾಂಸ್ಕೃತಿಕ ರಾಜಕಾರಣದ ಪರಿವೆಯೇ ಇಲ್ಲದಂತೆ ಬದುಕಿದ್ದ ವಿಜಯ್ ರೆಡ್ಡಿ ತಮ್ಮ ಚಿತ್ರಗಳ ಮೂಲಕ ಕನ್ನಡ ಚಿತ್ರರಂಗವನ್ನು, ಕನ್ನಡಿಗರ ಸ್ಮೃತಿಯನ್ನು ಸಮೃದ್ಧಗೊಳಿಸಿ ಇದೀಗ ನಿರ್ಗಮಿಸಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in